# ಟೆಲಿಗ್ರಾಮ್: ಆಟೋ ಡಿಲೀಟ್ ಆಯ್ಕೆ!



■ **ಶಶಿಕುಮಾರ್ ಸಿ.**

ವಾಟ್ಸ್‌ಆ್ಯಪ್‌ನ ಹೊಸ ನೀತಿಯ ವಿವಾದದ ನಂತರ 'ಟೆಲಿಗ್ರಾಮ್' ಸೇರಿದಂತೆ ಕೆಲವು ಪರ್ಯಾಯ ಮೆಸೇಜಿಂಗ್ ಆ್ಯಪ್‌ಗಳ ಬಳಕೆಯ ಪ್ರಮಾಣ ಹೆಚ್ಚಾಗಿದೆ. ಇದರಲ್ಲಿ ಟೆಲಿಗ್ರಾಮ್ ಕೊಂಚ ಮುಂದಿದ್ದು, ತನ್ನ ಬಳಕೆದಾರರಿಗೆ ಯಾವುದೇ ರೀತಿಯ ತಂತ್ರಾಂಶ ಸೌಲಭ್ಯದ ಕೊರತೆ ಕಾಡಬಾರದೆಂಬ ಕಾರಣಕ್ಕಾಗಿಯೇ ಹೊಚ್ಚ ಹೊಸ ಫೀಚರ್ಸ್ ಅನ್ನು ಪರಿಚಯಿಸುತ್ತಿದೆ. ಈ ಪೈಕಿ ವಾಟ್ಸ್‌ಆ್ಯಪ್‌ನ 'ಡಿಸ್ ಅಪಿಯರಿಂಗ್' ಆಯ್ಕೆಯ ಮಾದರಿಯ 'ಆಟೊ ಡಿಲೀಟ್ ಮೆಸೇಜ್' (autodelete messages) ಫೀಚರ್ ಅನ್ನು ತನ್ನ ಬಳಕೆದಾರರಿಗೆ ಪರಿಚಯಿಸಿದೆ.

ಟೆಲಿಗ್ರಾಮ್ ಗ್ರೂಪ್ ಚಾಟ್ ಹಾಗೂ ವೈಯಕ್ತಿಕ ಚಾಟ್‌ನ ಬಳಕೆಯ ನಡುವೆ ಅನುಕೂಲವಾಗಲೆಂದು 'ಸ್ವಯಂ ಅಳಿಸುವ ಮೆಸೇಜ್' ಆಯ್ಕೆಯು ನೆರವಾಗಲಿದೆ. ಈ ಹಿಂದೆ ಸೀಕ್ರೆಟ್ ಚಾಟ್‌ಗಳಿಗಷ್ಟೇ ಈ ಸೌಲಭ್ಯವಿತ್ತು, ಇದನ್ನು ಎಲ್ಲಾ ಗ್ರಾಹಕರಿಗೆ ಈಗ ವಿಸ್ತರಿಸಲಾಗಿದೆ. ಇನ್‌ಸ್ಟಂಟ್ ಮೆಸೇಜಿಂಗ್ ಪ್ಲಾಟ್‌ಫಾರ್ಮ್‌ನ ಬಳಕೆದಾರರು ಸಂದೇಶಗಳನ್ನು ಕಳುಹಿಸುವ ಮೊದಲು ಯಾವುದೇ ಚಾಟ್‌ಗಳಲ್ಲಿ 24 ಗಂಟೆಗಳ ಅಥವಾ 7 ದಿನಗಳ ಟೈಮರ್ ಅನ್ನು ಹೊಂದಿಸಲು ಈ ಆಯ್ಕೆಯಿಂದ ಸಾಧ್ಯವಾಗುತ್ತದೆ.

ಆಯ್ದ ಕಾಲಮಿತಿಯ ನಂತರ, ಗುಂಪಿನ ಎಲ್ಲಾ ಬಳಕೆದಾರರಿಗೆ ಅಥವಾ ವೈಯಕ್ತಿಕ ಚಾಟ್‌ನಲ್ಲಿ ಸಿಂಗಲ್ ರೆಸಿಪಿಯೆಂಟ್ ಮೆಸೇಜ್‌ಗಳು ಕಣ್ಮರೆಯಾಗುತ್ತವೆ. ಗುಂಪು ಮತ್ತು ಚಾನೆಲ್‌ಗಳಲ್ಲಿ ಈ ಫೀಚರ್ ಅನ್ನು ಸಕ್ರಿಯಗೊಳಿಸಲು ಅಥವಾ ಎಡಿಟ್ ಮಾಡಲು ಅಡ್ಮಿನ್‌ಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಎಲ್ಲಾ ಮೆಸೇಜ್‌ಗಳು ಆಟೊ ಡಿಲೀಟ್ ಆಗುವ ಕೆಲವು ಕ್ಷಣಗಳ ಮುಂಚಿತವಾಗಿ, 'ನಿಮ್ಮ ಕಾಂಟ್ಯಾಕ್ಟ್‌ನಲ್ಲಿರುವ ಅಥವಾ ಗ್ರೂಪ್‌ನಲ್ಲಿರುವ ಮೆಸೇಜ್‌ಗಳು ಆಟೊ ಡಿಲೀಟ್ ಆಗಲಿವೆ' ಎಂಬರ್ಥದ ಕ್ಷಣಗಣನೆಯ (ಟೈಮರ್) ಸೂಚನೆಯು ಬಳಕೆದಾರರಿಗೆ ಲಭ್ಯವಾಗಲಿದೆ. ಇದರಿಂದ ಎಚ್ಚೆತ್ತುಕೊಂಡು ತೀರಾ ಅವಶ್ಯವಿರುವ ಮೆಸೇಜ್‌ಗಳನ್ನು ಹಾಗೆಯೇ ಕಾಪಿಟ್ಟುಕೊಳ್ಳುವ ಅವಕಾಶವನ್ನು ಬಳಕೆದಾರರಿಗೆ ನೀಡಲಾಗಿದೆ. ವಾಟ್ಸ್‌ಆ್ಯಪ್‌ನ ಡಿಸ್‌ಅಪಿಯರಿಂಗ್ ಆಯ್ಕೆಗಿಂತಲೂ ಟೆಲಿಗ್ರಾಮ್‌ನ ಈ ಆಯ್ಕೆಯು ಹೆಚ್ಚು ವಿಶೇಷವಾಗಿದೆ.

ಕ್ಷಣಗಣನೆಯ ಸೂಚನೆಯು ಸಿಕ್ಕ ಬಳಿಕ ಬಳಕೆದಾರರು ಆ್ಯಂಡ್ರಾಯ್ಡ್ ಫೋನ್ ಅನ್ನು ಟ್ಯಾಪ್ ಮಾಡುವ ಮೂಲಕ ನಿರ್ದಿಷ್ಟ ಮೆಸೇಜ್‌ಗಳು ಸ್ವೀಕಾರ ಹಾಗೂ ರವಾನೆಯಾದ ಸಮಯವನ್ನು ಟ್ರ್ಯಾಕ್ ಮಾಡಬಹುದು. ಇನ್ನು 'ಐಒಎಸ್' ಆವೃತ್ತಿಯಲ್ಲಿ ನಿರ್ದಿಷ್ಟ ಮೆಸೇಜ್ ಟ್ರ್ಯಾಕ್ ಮಾಡಲು ಮೆಸೇಜ್ ಅನ್ನು ಒತ್ತಿ ಹಿಡಿಯಬೇಕು. ಆಟೊ ಡಿಲೀಟ್ ಟೈಮರ್ ಸೆಟ್ ಮಾಡಿದ ನಂತರ ಸ್ವೀಕರಿಸುವ ಹಾಗೂ ರವಾನಿಸುವ ಮೆಸೇಜ್‌ಗಳಿಗೆ ಮಾತ್ರ ಈ ಸೌಲಭ್ಯವು ಅನ್ವಯವಾಗುತ್ತದೆ ಎಂದು ಟೆಲಿಗ್ರಾಮ್ ಹೇಳಿದೆ.

ಹೆಚ್ಚಿನ ಗೌಪ್ಯತೆ ಮತ್ತು ಉತ್ತಮ ಸುರಕ್ಷತೆಯೊಂದಿಗೆ ಬಳಕೆದಾರರ ಚಾಟ್ ಅನುಭವವನ್ನು ಹೆಚ್ಚಿಸಲು, ಟೆಲಿಗ್ರಾಮ್ ಇನ್ನೂ ಹಲವಾರು ರೀತಿಯ ಹೊಸ ಫೀಚರ್ಸ್ ಅನ್ನು ಬಳಕೆಗೆ ಮುಕ್ತಗೊಳಿಸಿದೆ. ಅವಧಿ ಮುಗಿದ ಆಹ್ವಾನ ಲಿಂಕ್‌ಗಳು, ಆಮಂತ್ರಣಗಳನ್ನು ಸೇರುವಂತೆ ಸ್ಕ್ಯಾನ್ ಮಾಡಬಹುದಾದ ಕ್ಯೂಆರ್ ಕೋಡ್‌ಗಳು, ಆ್ಯಂಡ್ರಾಯ್ಡ್ ಮತ್ತು ಐಒಎಸ್‌ಗಾಗಿ ಹೋಮ್ ಸ್ಕ್ರೀನ್ ವಿಜೆಟ್‌ಗಳು ಇವೆ ಮೊದಲಾದವು.

ಲೈವ್ ಧ್ವನಿ ಚಾಟ್‌ನೊಂದಿಗೆ ಸಂಪರ್ಕ ಸಾಧಿಸಲು ಬ್ರಾಡ್‌ಕಾಸ್ಟ್ ಗ್ರೂಪ್ಸ್ ಎಂಬ ಹೊಸ ರೂಪದ ಟೆಲಿಗ್ರಾಮ್ ಗುಂಪನ್ನು ಪರಿಚಯಿಸಲಾಗಿದೆ. ಯಾವುದೇ ಸ್ಪ್ಯಾಮ್ ವಿಷಯ ಅಥವಾ ನಕಲಿ ಖಾತೆಗಳು, ಹಿಂಸಾಚಾರ, ಮಕ್ಕಳ ಮೇಲಿನ ದೌರ್ಜನ್ಯ, ಅಶ್ಲೀಲತೆ ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ವರದಿ ಮಾಡಲು ಬಳಕೆದಾರರಿಗೆ ಇದು ತ್ವರಿತ ಮತ್ತು ಸುಲಭವಾಗಿದೆ. ■

### ಇನ್‌ಸ್ಟಾಗ್ರಾಮ್ ಲೈಟ್‌ನಲ್ಲೂ ರೀಲ್ಸ್!

ಇನ್‌ಸ್ಟಾಗ್ರಾಮ್ ಜನಪ್ರಿಯ ಸೋಷಿಯಲ್ ಮೀಡಿಯಾ ಅಪ್ಲಿಕೇಷನ್‌ಗಳ ಪೈಕಿ ಒಂದು. ಇದರ ಅಂಗವಾಗಿಯೇ ಅತ್ಯಂತ ಹಗುರವಾದ ಇನ್‌ಸ್ಟಾಗ್ರಾಮ್ ಲೈಟ್ ಆ್ಯಪ್ ಅನ್ನೂ ಅದು ಈಚೆಗೆ ಪರಿಚಯಿಸಿತ್ತು. ಆದರೆ ಈ ಆ್ಯಪ್ ರೀಲ್ಸ್ ಸೇರಿದಂತೆ ಇನ್‌ಸ್ಟಾಗ್ರಾಮ್‌ನ ಪ್ರಮುಖ ಹೊಸ ಹೊಸ ಫೀಚರ್‌ಗಳನ್ನು ಒಳಗೊಂಡಿರಲಿಲ್ಲ. ಆದರೀಗ ಇನ್‌ಸ್ಟಾಗ್ರಾಮ್‌ನ ಲೈಟ್ ಆ್ಯಪ್‌ನಲ್ಲೂ ರೀಲ್ಸ್ ಸೇರಿದಂತೆ ಕೆಲ ಪ್ರಮುಖ ಫೀಚರ್‌ಗಳು ಲಭ್ಯವಿವೆ.

ಇನ್‌ಸ್ಟಾಗ್ರಾಮ್ ಲೈಟ್ ಅಪ್ಲಿಕೇಷನ್ ಕೇವಲ 2 ಎಂಬಿ ಗಾತ್ರದ ಆ್ಯಪ್, 2ಎಂಬಿ ಫೈಲ್ ಗಾತ್ರವನ್ನು ಅಳೆಯುವ ಹಗುರವಾದ ಆವೃತ್ತಿಗೆ ಇದು ಇಳಿದಿದೆ.

ಫೋಟೊ ಮತ್ತು ವಿಡಿಯೊ ಹಂಚಿಕೆ ಅಪ್ಲಿಕೇಷನ್ ಇನ್‌ಸ್ಟಾಗ್ರಾಮ್ ಕಳೆದ ವರ್ಷ ಡಿಸೆಂಬರ್‌ನಲ್ಲಿ ಲೈಟ್ ಅಪ್ಲಿಕೇಷನ್ ಅನ್ನು ಪರೀಕ್ಷಿಸಲು ಪ್ರಾರಂಭಿಸಿತ್ತು. ಅಲ್ಲದೆ ಇದನ್ನು Facebook Fuel for India eventನಲ್ಲಿ ಪರಿಚಯಿಸಿತ್ತು. ಇನ್ನು ಪ್ರಾರಂಭಿಕ ಸಮಯದಲ್ಲಿ, ಇನ್‌ಸ್ಟಾಗ್ರಾಮ್ ಲೈಟ್ ಅಪ್ಲಿಕೇಷನ್ ರೀಲ್ಸ್, ಐಜಿಟಿವಿ ಮತ್ತು ಶಾಪಿಂಗ್ ವಿಶೇಷತೆಗಳ ಬೆಂಬಲವನ್ನು ಹೊಂದಿರಲಿಲ್ಲ. ಆದರೆ ಇದೀಗ ರೀಲ್ಸ್ ಫೀಚರ್ಸ್ ಅನ್ನು ಬೆಂಬಲಿಸಲಿದೆ.

ಅಲ್ಲದೆ ಇನ್‌ಸ್ಟಾಗ್ರಾಮ್ ಅಪ್ಲಿಕೇಷನ್‌ನ ಟ್ರಿಮ್‌ಡೌನ್ ಆವೃತ್ತಿಯನ್ನು ಹಗುರವಾದ ಅನುಭವ ನೀಡಲು ವಿನ್ಯಾಸಗೊಳಿಸಲಾಗಿದೆ. ಈಗ ಈ ಅಪ್‌ಡೇಟ್‌ನೊಂದಿಗೆ, ಭಾರತದಲ್ಲಿ ಇನ್‌ಸ್ಟಾಗ್ರಾಮ್ ಲೈಟ್ ಅಪ್ಲಿಕೇಷನ್ ಬಳಸುವ ಪ್ರತಿಯೊಬ್ಬರೂ ರೀಲ್ಸ್ ಟ್ಯಾಬ್‌ನೊಂದಿಗೆ ರೀಲ್‌ಗಳನ್ನು ವೀಕ್ಷಿಸಲು ಸಾಧ್ಯವಾಗಲಿದೆ.

### ರೀಲ್ಸ್ ಬಳಸುವುದು ಹೇಗೆ?

ಮೊದಲು ಇನ್‌ಸ್ಟಾಗ್ರಾಮ್ ಲೈಟ್ ಅಪ್ಲಿಕೇಷನ್ ಅನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು. ನಂತರ ಆ್ಯಪ್‌ನಲ್ಲಿ ರೀಲ್ಸ್ ಆಯ್ಕೆಯು ಕಾಣಿಸಿಕೊಳ್ಳುತ್ತದೆ. ರೀಲ್ಸ್ ಟ್ಯಾಬ್ ಅನ್ನು ಪ್ರವೇಶಿಸಲು ಮತ್ತು ಪ್ಲಾಟ್‌ಫಾರ್ಮ್‌ನಲ್ಲಿ ಜನಪ್ರಿಯ ಕಿರು ವಿಡಿಯೊಗಳನ್ನು ವೀಕ್ಷಿಸಲು ಸಾಧ್ಯವಾಗುತ್ತದೆ. ವಿಶೇಷವೆಂದರೆ, ಈ ಅಪ್ಲಿಕೇಷನ್ ಬಾಂಗ್ಲಾ, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು ಸೇರಿದಂತೆ ಅನೇಕ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿದೆ. ■